ಅಂಚೆ ಇಲಾಖೆ ಜತೆ ಕೆಲ ರೈತರ ಒಡಂಬಡಿಕೆ

ಬಾದಾಮಿ ಮಾವಿನ ಹಣ್ಣಿಗೆ ಬೇಡಿಕೆ

ಬೆಳಗ್ಗೆ ಬುಕ್ ಮಾಡಿದರೆ ಸಂಜೆ ತಾಜಾ ಮಾವಿನಹಣ್ಣು

• ದೇವೇಶ ಸೂರಗುಪ್ಪ

ಬೆಂಗಳೂರು: ಮಾರುಕಟ್ಟೆಯಲ್ಲಿ ಮಾವಿನ ಹಣ್ಣಿನ ಸೀಜನ್ ಆರಂಭವಾಗಿದ್ದು ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಸ್ಪೀಡ್ ಪೋಸ್ಟ್ ವಿಭಾಗ ಮಾವಿನ ಹಣ್ಣಿನ ಸ್ಪೀಡ್ ಪೋಸ್ಟ್ ಸೇವೆಯನ್ನು ಆರಂಭಿಸಿದೆ. ನಗರದ ಗ್ರಾಹಕರು ಅಂಚೆ ಮೂಲಕ ಬೆಳಗ್ಗೆ ಬುಕ್ ಮಾಡಿ ಸಂಜೆ ವೇಳೆಗೆ ಮನೆ ಬಾಗಿಲಿಗೆ ತಾಜಾ ಹಣ್ಣುಗಳನ್ನು ತರಿಸಿಕೊಳ್ಳುತ್ತಿದ್ದಾರೆ.

ತೋತಾಪುರಿ, ಬಂಗನ್‌ಪಲ್ಲಿ, ಶುಗರ್ ಬೇಬಿ, ನೀಲಂ, ರಸಪುರಿ, ಮಲ್ಲಿಕಾ ಸೇರಿದಂತೆ ತರಹೇವಾರಿ ಮಾವಿನ ಹಣ್ಣುಗಳಿಗೆ ಗ್ರಾಹಕರು ಬೇಡಿಕೆ ಸಲ್ಲಿಸುತ್ತಿದ್ದಾರೆ. ಈ ಪೈಕಿ ಬಾದಾಮಿಗೆ ಹೆಚ್ಚು ಡಿಮ್ಯಾಂಡ್ ಇದೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂ ಕಿನ ಬಂಡಪಲ್ಲಿ ಗ್ರಾಮದ ಚಂದ್ರಾರೆಡ್ಡಿ ಅಂಚೆ ಇಲಾಖೆ ಜತೆಗೆ ಒಡಂಬಡಿಕೆ ಮಾಡಿಕೊಂಡಿದ್ದು ವಿವಿಧ ಮಾವಿನ ಹಣ್ಣುಗಳ ಮಾರಾಟದಲ್ಲಿ ತೊಡಗಿದ್ದಾರೆ. ಕಳೆದ 15 ದಿನಗಳ ಹಿಂದೆ ಆನ್‌ಲೈನ್ ಮೂಲಕ ಮಾರಾಟ ಸೇವೆ ಪ್ರಾರಂಭಿಸಿದ್ದು ಇದುವರೆಗೂ 3 ಕೆ.ಜಿ. ತೂಕದ ಸುಮಾರು 2,200 ಬಾಕ್ಸ್ ಮಾವಿನ



ಹಣ್ಣುಗಳನ್ನು ಸಿಲಿಕಾನ್ ಸಿಟಿಯ ಗ್ರಾಹಕರಿಗೆ ಪೂರೈಸಿದ್ದಾರೆ.ಆರಂಭದಲ್ಲಿ ಸಿಮೀತ ಸಂಖ್ಯೆಯಲ್ಲಿ ಆರ್ಡರ್ ಬರುತ್ತಿದ್ದವು. ಇದೀಗ ವಾರಕ್ಕೆ 50 ರಿಂದ 60 ಆರ್ಡರ್ ಬರುತ್ತಿವೆ. ಶನಿವಾರ ಮತ್ತು ಭಾನುವಾರ ದಿನದಂದು 200 ಬಾಕ್ಸ್ ವರೆಗೂ ಆರ್ಡರ್ ಬರುತ್ತಿವೆ. ಎಲ್ಲರೀತಿಯ ಹಣ್ಣುಗಳಿಗೂ ಗ್ರಾಹಕರು ಬೇಡಿಕೆಯಿಡುತ್ತಿದ್ದಾರೆ ಎಂದು ಶ್ರೀನಿವಾಸಪುರದ ಬಂಡಪಲ್ಲಿ ಮಾವು ಬೆಳೆಗಾರ ಚಂದ್ರಪ್ಪ ರೆಡ್ಡಿ ಹೇಳುತ್ತಾರೆ.

'ಉದಯವಾಣಿ' ಜತೆ ಮಾತನಾಡಿದ ಅವರು, ವಾರಕ್ಕೆ 2 ದಿನ ಮಾವಿನ ಹಣ್ಣುಗಳನ್ನು ಪೂರೈಸಲಾಗುತ್ತಿದೆ. ಸೋಮವಾರ ಮತ್ತು ಗುರುವಾರ ಅಂಚೆ ಮೂಲಕ ಗ್ರಾಹಕರ ಮನೆಬಾಗಿಲಿಗೆ ತಲುಪಿಸಲಾಗುತ್ತಿದೆ. ಪ್ರತಿ ಬಾಕ್ಸ್ ಮಾವಿನ ಹಣ್ಣು 300 ರೂ.ದಿಂದ 1000 ರೂ.ವರೆಗೂ ಮಾರಾಟವಾಗುತ್ತದೆ ಎಂದು ಮಾಹಿತಿ ನೀಡುತ್ತಾರೆ.

ಶುಗರ್ ಬೇಬಿಗೆ ಹೆಚ್ಚು ರೇಟ್: ಬಾದಾಮಿ ಹಣ್ಣಿಗೆ ಗ್ರಾಹಕರಿಂದ ಬೇಡಿಕೆ ಉಂಟಾಗಿದೆ. ವಾರಕ್ಕೆ 200 ಬಾಕ್ಸ್‌ಗಳು ಖರೀದಿ ಆಗುತ್ತಿದೆ. ಹಿಮಾಪಸಂದ್ ಮಾವಿನ ಹಣ್ಣು 100 ಬಾಕ್ಸ್, ರಸಪುರಿ 50 ಬಾಕ್ಸ್, ಮಲ್ಲಿಕಾ 50 ಬಾಕ್ಸ್, ಶುಗರ್ 5 ಬಾಕ್ಸ್ ಮಲಗೋಬಾ ಮಾವಿನ ಹಣ್ಣು 10 ಬಾಕ್ಸ್ ಮಾರಾಟವಾಗಿದೆ. ರಸಪುರಿ ಮಾವಿನ ಹಣ್ಣು (3 ಕೆ.ಜಿ. ಬಾಕ್ಸ್) 600 ರೂ, ಮಲ್ಲಿಕಾ 600 ರೂ, ಬಾದಾಮಿ 750 ರೂ, ಹಿಮಾಪಸಂದ್ 900 ರೂ, ಶುಗರ್ ಬೇಬಿ 1000 ರೂ.ಗೆ ಮಾರಾಟವಾಗುತ್ತಿದೆ.

ಕಳೆದ ಬಾರಿ ಹೋಲಿಸಿದರೆ ಈ ಬಾರಿ ಮಾವಿನ ಫಸಲು ಕಡಿಮೆ. ಹೂವು ಬಿಡುವ ವೇಳೆ ಕೀಟಬಾಧೆಯಿಂದ ಮಾವಿನ ಫಸಲಿಗೆ ನಷ್ಟ ಉಂಟಾಯಿತು. ಹೀಗಾಗಿ ಈ ವರ್ಷ ಶೇ.20ರಷ್ಟು ಮಾತ್ರ ಮಾವಿನ ಫಸಲು ಇದೆ. ಮುಂದಿನ ದಿನಗಳಲ್ಲಿ ಮಾವಿನ ಹಣ್ಣಿಗೆ ಮತ್ತಷ್ಟು ಬೇಡಿಕೆ ಉಂಟಾಗುವ ನಿರೀಕ್ಷೆಯಿದೆ ಎಂದು ಮಾವಿನ ಬೆಳೆಗಾರರು ಹೇಳುತ್ತಾರೆ.

100 ಟನ್ ಮಾವಿನ ಹಣ್ಣಿನ ಮಾರಾಟ ಗುರಿ

ಕಳೆದ ಬಾರಿ ಮ್ಯಾಂಗೋ ಬೋರ್ಡ್ ಮೂಲಕ ಗ್ರಾಹಕರ ಮನೆಬಾಗಿಲಿಗೆ ಮಾವಿನ ಹಣ್ಣುಗಳನ್ನು ಅಂಚೆ ಮೂಲಕ ತಲುಪಿಸಲಾಗಿತ್ತು. ಈ ವರ್ಷ ಕೋಲಾರ ಭಾಗದ ಕೆಲವು ಮಾವು ಬೆಳೆಗಾರರು ಆನ್‌ಲೈನ್ ಮೂಲಕ ಸಿಲಿಕಾನ್ ಸಿಟಿಯ ಗ್ರಾಹಕರಿಗೆ ತಲುಪಿಸಲು ಮುಂದಾಗಿದ್ದಾರೆ. ಬೆಳಗ್ಗೆ 8 ಗಂಟೆಗೆ ಮಾವಿನ ಹಣ್ಣಿನ ಬಾಕ್ಸ್‌ಗಳನ್ನು ನೀಡಿದರೆ ಸಂಜೆ ಒಳಗಾಗಿ ಗ್ರಾಹಕರ ಮನೆಬಾಗಿಲಿಗೆ ಅಂಚೆಯಣ್ಣ ತಲುಪಿಸಲಿದ್ದಾನೆ ಎಂದು ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸದ್ಯ ಬೆಂಗಳೂರು ಸಿಟಿಗೆ ಮಾತ್ರ ನಮ್ಮ ಸೇವೆಯನ್ನು ಸೀಮಿತ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ನಗರ ಹೊರವಲಯಗಳಲ್ಲಿರುವ ಗ್ರಾಹಕರ ಮನೆ ಬಾಗಿಲಿಗೂ ತಲುಪಿಸಲಾಗುವುದು. ಕಳೆದ ವರ್ಷ ಸುಮಾರು 70 ಟನ್ ಮಾವಿನ ಹಣ್ಣುಗಳನ್ನು ಮಾರಾಟ ಮಾಡಿದ್ದೇವು. ಈ ವರ್ಷ ಸುಮಾರು 100 ಟನ್ ಮಾವಿನ ಹಣ್ಣು ಮಾರಾಟ ಮಾಡುವ ಗುರಿ ಹೊಂದಲಾಗಿದೆ ಎಂದು ಹೇಳುತ್ತಾರೆ.

ಕಳೆದ ಮೇ ತಿಂಗಳಲ್ಲಿ ಮಾವು ಮಾರಾಟ ಆರಂಭಿಸಲಾಗಿತ್ತು. ಆದರೆ ಈ ವರ್ಷ ಕೋಲಾರ ಭಾಗದ ಕೆಲವು ರೈತರು ಮಾವಿನ ಹಣ್ಣುಗಳನ್ನು ಸ್ಪೀಡ್ ಪೋಸ್ಟ್ ಮೂಲಕ ರಾಜಧಾನಿಯ ಗ್ರಾಹಕರಿಗೆ ತಲುಪಿಸಲು ಮುಂದೆ ಬಂದಿದ್ದಾರೆ. ಆ ಹಿನ್ನೆಲೆಯಲ್ಲಿ ಈ ವರ್ಷ ಏಪ್ರಿಲ್ ತಿಂಗಳಾಂತ್ಯದಲ್ಲಿ ಮಾರಾಟ ಸೇವೆ ಆರಂಭಿಸಲಾಗಿದೆ. ಗ್ರಾಹಕರಿಂದಲೂ ಸಾಕಷ್ಟು ಬೇಡಿಕೆ ಬಂದಿದೆ. ಶೀಘ್ರದಲ್ಲಿ ಮ್ಯಾಗೋ ಬೋರ್ಡ್ ಕೂಡ ಆನ್‌ಲೈನ್ ಮೂಲಕ ಮಾವು ಮಾರಾಟ ಸೇವೆ ಆರಂಭಿಸಲಿದೆ.

• ರಾಘವೇಂದ್ರ,
ಮ್ಯಾನೇಜರ್ ಸ್ಪೀಡ್ ಪೋಸ್ಟ್ ಸೇವೆಗಳ ವಿಭಾಗ ಬೆಂಗಳೂರು ವೃತ್ತ

25-04-2023
Udayavani Pg 04

Green theory

This city-based documentary maker's latest explores the life of celebrated horticulturist HC Javaraya

MONIKA MONALISA

IT is known to every Bengalurean that German horticulturist Gustav Hermann Krumbiegel, changed the landscape of the city, but his successor HC Javaraya also had an equal contribution to it. The latest book by Meera Iyer, a writer, researcher and convenor of INTACH, *Bahadur HC Javaraya: A Gardener and a Gentleman*, revolves around the life of horticulturist HC Javaraya. Inspired from the book, city-based filmmaker **Ganesh Shankar Raj** has adapted it into a documentary.

Raj says Javaraya was one of the key and native horticulturists in India, and the first deputy superintendent of Lalbagh. "He was a successor of renowned horticulturist Gustav Hermann Krumbiegel, who actually set up various gardens in Bengaluru. Even Indian Institute of Horticulture and Research (IIHR) as set up by this gentleman as a Fruit Research Institute in the 1930s. Today, it has grown to become one of the premier institutes in the country. He is the one who created the famous 'Agmark' for fruits," says Raj.

Javaraya was known as the fruit man of the then Mysore state. "If you see so much fruit cultivation in Bengaluru, it is because of him. He introduced a wide variety of the fruits in Bengaluru. He was even the first person to cultivate apples. There was a thriving apple cultivation that took place in Bengaluru during his time and then everything died down," says Raj, adding that Javaraya is an unsung hero. "Nobody knows about him. So therefore, we decided to make a film in association with the family," Raj further adds.

Raj's last documentary was on Krumbiegel and he admits to having a soft spot for horticulturists who shaped Bengaluru. "We do different kinds of films, but these people have done tremendous amount of work for the city. In Bengaluru, you can see a lot of trees, gardens and flowers...these stalwarts were responsible for it. Therefore, we decided to make a film that speaks about their contribution," says Raj.



HC Javaraya



If you see so much fruit cultivation in Bengaluru, it is because of Javaraya. He introduced a wide variety here

— Ganesh Shankar Raj, filmmaker

25-04-2023
Ind Exp add Pg 01

For more information visit
University Library Website
Web - uasbagrilibindia.org
E-mail- librarian@uasbangalore.edu.in